ಶಾಲೆ ಬಿಟ್ಟು ಅಷ್ಟು ಕಷ್ಟ ಪಡುತ್ತಿರುವುದೂ ಸಹ ಮಲ್ಲಿಕಾರ್ಜುನನಿಗೆ ಕರುಣೆ ತರಿಸಲಿಲ್ಲ. ತನ್ನ ಜಮೀನನ್ನು ತನಗೇ ಮಾರಲು ಬಿಡದ ಹೆಂಡತಿಯ ಅಣ್ಣನ ಮೇಲೆ ಇಲ್ಲಸಲ್ಲದ್ದು ಹೇಳುತ್ತಾ ಅಲೆಯುತ್ತಿದ್ದ. ಗಂಡ ಹಾಸಿಗೆ ಹಿಡಿದಿದ್ದರೂ, ಮತ್ತೊಂದು ಮದುವೆಯಾಗಿದ್ದರೂ ಹೇಗೋ ತಡೆದುಕೊಳ್ಳುತ್ತಿದ್ದಳೇನೋ. ಆದರೆ ಆಗಾಗ ಬಂದು ಹೆಂಡತಿ ಮಕ್ಕಳನ್ನು ಮಾನಸಿಕ ಹಿಂಸೆಗೆ ಗುರಿಮಾಡುವ ಇವನು ಹೀಗೆ ಮನೆಯಿಂದ ಹೋಗುವ ಬದಲು ಸತ್ತೇ ಹೋಗಬಾರದಿತ್ತೇ ಎಂದು ಎಷ್ಟೋ ಬಾರಿ ಮಕ್ಕಳ ಮುಂದೆಯೇ ಆಡಿದ್ದಾಳೆ ಸುನಂದ.

ಹೆಣ್ಣು ಮಕ್ಕಳದ್ದೆಲ್ಲ ನೆಮ್ಮದಿಯ ಸಂಸಾರವಾಗಿ, ಮಗನದ್ದೂ ಮದುವೆಯಾಗಿ ಸೊಸೆ ಬಂದಮೇಲೆ ಸುನಂದ, ಮಗ ಸೊಸೆಯ ಮೇಲೆ ಎಲ್ಲಾ ಜವಾಬ್ದಾರಿಯನ್ನೂ ಬಿಟ್ಟು, ಮೊಮ್ಮಕ್ಕಳನ್ನು ನೋಡಿಕೊಂಡು, ಸೊಸೆಗೆ ಮನೆಗೆಲಸದಲ್ಲಿ ಸಹಾಯ ಮಾಡಿಕೊಂಡು, ಹೆಣ್ಣು ಮಕ್ಕಳನ್ನು ಕರೆದು ಕಳಿಸಿ ಮಾಡುತ್ತಾ ಎಷ್ಟೋ ನೆಮ್ಮದಿಯಾಗಿದ್ದಳು. ತನ್ನದೇ ಹೆಣ್ಣು ಮಕ್ಕಳ ಮದುವೆ ಮಾಡುವಾಗ ಬಾರದ ಈ ಪರಿಸ್ಥಿತಿ ಮೊಮ್ಮಗಳ ಮದುವೆಗೆ ಬಂದೀತೆಂದು ಅವಳು ಅಂದುಕೊಂಡಿರಲಿಲ್ಲ. ಮೊದಲೆರಡು ಹೆಣ್ಣು ಮಕ್ಕಳ ಮದುವೆಗಷ್ಟೇ ಮಲ್ಲಿಕಾರ್ಜುನನ ಜೊತೆ ಅವಳು ಧಾರೆ ಎರೆದು ಕನ್ಯಾದಾನ ಮಾಡಿದ್ದು, ಇನ್ನುಳಿದವರ ಮದುವೆಯಲ್ಲಿ ಇವನು ಬರುತ್ತಾನೋ ಇಲ್ಲವೋ, ಬಂದರೂ ಶಾಸ್ತ್ರಗಳನ್ನು ಮಾಡುತ್ತಾನೋ ಇಲ್ಲವೋ ಎಂಬ ಗ್ಯಾರಂಟಿ ಇಲ್ಲದೇ, ತನ್ನಣ್ಣ ಅತ್ತಿಗೆಯೇ ತಂದೆ ತಾಯಿಯ ಸ್ಥಾನದಲ್ಲಿ ನಿಂತು ಮದುವೆ ಶಾಸ್ತ್ರಗಳನ್ನು ನಡೆಸಿಕೊಡುವಂತೆ ನೋಡಿಕೊಂಡಿದ್ದಳು. ಮಗನ ಮದುವೆ ಮಾಡಲು ಎಲ್ಲಿ ಹುಡುಕಿದರೂ ಅಪ್ಪನ ಇತಿಹಾಸದಿಂದಾಗಿ ಹೆಣ್ಣು ಸಿಗುವುದೇ ಕಷ್ಟವಾದಾಗ ಸುನಂದ ಮತ್ತು ಹೆಣ್ಣು ಮಕ್ಕಳೆಲ್ಲ ಮಲ್ಲಿಕಾರ್ಜುನನಿಗ ಹಿಡಿ ಶಾಪ ಹಾಕಿದ್ದರು. ಕೊನೆಗೂ ಅವನಿಗೆ ಒಂದು ಹೆಣ್ಣು ಸಿಕ್ಕು ಮದುವೆಯಾದ ಮೇಲೆ ಅವರೆಲ್ಲಾ ಹೆಸರಿಗಷ್ಟೇ ಅಪ್ಪ ಎನಿಸಿಕೊಂಡವನನ್ನು ಹೆಚ್ಚೂ ಕಮ್ಮಿ ಮರೆತೇ ಬಿಟ್ಟರು. ಸುನಂದಮ್ಮನ ಕೊನೆಯ ಮೊಮ್ಮಗನನ್ನು ನೋಡಿದವರೆಲ್ಲಾ ನೋಡೋಕೆ ಥೇಟು ಮಲ್ಲಿಕಾರ್ಜುನ ಐನೋರ ಹಾಗೇ ಇದ್ದಾನೆ, ನಿಮ್ಮ ಮನೆಯವರ ಹಾಗೆನೇ ಭಾರಿ ಚುರುಕು ಎಂದೆಲ್ಲಾ ಹೇಳುವಾಗ ಸುನಂದ ಅಯ್ಯೋ ಅವರಂಗೇ ಯಾರೂ ಇರೋದು ಬೇಡ ಎನ್ನುತ್ತಿದ್ದರೂ, ಅವನ ತರಲೆ, ಹಟಮಾರಿತನ ಕಂಡಾಗ ಗಂಡನ ನೆನಪಾಗಿ ಕಿರಿಕಿರಿಯಾಗುತ್ತಿತ್ತು.

ಮಗನ ಹಿರಿ ಮಗಳು ಸಂಗೀತಾ ಎಂದರೇ ಅದ್ಯಾಕೋ ಸುನಂದಮ್ಮನಿಗೆ ಮೊಮ್ಮಕ್ಕಳಲ್ಲೆಲ್ಲಾ ಅಚ್ಚು ಮೆಚ್ಚು. ಅಜ್ಜಿಯ ಬೇಜಾರು ಕಳೆಯಲು ಚೌಕಾಬಾರ, ಚನ್ನೆಮಣೆ ಆಡುವವಳು, ಅಜ್ಜಿಯೊಂದಿಗೆ ಧಾರಾವಾಹಿ ನೋಡಿ ಅದರ ಬಗ್ಗೆ ತರಾವರಿ ಕಾಮೆಂಟು ಮಾಡುವವಳು, ಅಜ್ಜಿ ಕಾಲು ನೋವು ಎಂದಾಗ ಔಷಧಿ ತಿಕ್ಕುವವಳು, ಅಜ್ಜಿಯೊಂದಿಗೆ ಕೊಟ್ಟಿಗೆ ಕೆಲಸ ಮಾಡುವವಳು, ಅಜ್ಜಿಯೊಂದಿಗೆ ಹರಟೆ ಹೊಡೆಯುವವಳು ಅವಳೇ. ಸಂಗೀತಾ ಕಾಲೇಜಿಗೆ ಅಂತಾ ಸಿಟಿಗೆ ಹೋದರೆ ಸುನಂದಾಗೆ ಹೊತ್ತೇ ಹೋಗುವುದಿಲ್ಲ, ಹಾಗಂತ ಹುಡುಗಿಯ ಓದಿಗೆ ತೊಂದರೆ ಕೊಡುವವಳಲ್ಲ. ಇಂತಹ ಮುತ್ತಿನಂತಾ ಮೊಮ್ಮಗಳಿಗೆ ಒಳ್ಳೆಯ ಕಡೆ ಸಂಬಂಧ ಕೇಳಿಕೊಂಡು ಬಂದಾಗ ಸುನಂದಾ ಮಗ ಸೊಸೆಗಿಂತಲೂ ಹೆಚ್ಚು ಹಿಗ್ಗಿದ್ದಳು, ಅಕ್ಕ ಪಕ್ಕದವರಲ್ಲಿ ಕೊಚ್ಚಿಕೊಂಡು ಖುಷಿಪಟ್ಟಿದ್ದಳು.

ಹೆಣ್ಣು ನೋಡಲು ಬಂದಾಗ ಮಧ್ಯಸ್ಥಿಕೆ ವಹಿಸಿ ಗಂಡು ಕರೆದುಕೊಂಡು ಬಂದಿದ್ದವರು, ಸಂಗೀತಾಳನ್ನು ತೋರಿಸಿ ಇವಳೇ ನೋಡಿ ಮಲ್ಲಿಕಾರ್ಜುನ ಐನೋರ ಮೊಮ್ಮಗಳು ಎಂದಾಗ ಶೇಖರನಿಗೂ, ಸುನಂದಮ್ಮನಿಗೂ ಕಸಿವಿಸಿಯಾಯಿತು. ಆದರೆ ಸೊಸೆ ಸವಿತಾ ಅವರ ದೊಡ್ಡ ಕಾರು, ಬಂದಿದ್ದ ಇಬ್ಬರು ಹೆಂಗಸರ ಬೆಲೆಬಾಳುವ ಸೀರೆ, ಒಡವೆ, ಹುಡುಗನ ಲಕ್ಷಣವಾದ ಮುಖ, ದೊಡ್ಡ ಕೆಲಸ, ಕೈತುಂಬಾ ಸಂಬಳ ಇವೆಲ್ಲವುಗಳನ್ನು ನೋಡಿ ಆಗಲೇ ಈ ಸಂಬಂಧಕ್ಕೆ ಮರುಳಾಗಿದ್ದವಳು, ಇದುವರೆಗೆ ಮಾವ ಎನಿಸಿಕೊಂಡ ಮಹಾನುಭಾವನೊಡನೆ ಒಂದೇ ಒಂದು ಮಾತನ್ನೂ ಆಡದವಳು 'ಹೌದೌದು ನಮ್ಮೆಜಮಾನರೇ ಮಲ್ಲಿಕಾರ್ಜುನ ಐನೋರ ಒಬ್ಬರೇ ಮಗ, ಇವಳೇ ಅವರ ಹಿರಿ ಮೊಮ್ಮಗಳು' ಎಂದು ಹಲ್ಲುಕಿರಿದಳು. ಬರೀ ಬಿ.ಎ. ಓದಿದ್ದ ಸಂಗೀತಾಗೆ ಇದುವರೆಗೂ ಮನೆ ಕಡೆ ಸ್ಥಿತಿವಂತರಾಗಿದ್ದು, ಹುಡುಗ ಇಂಜಿನಿಯರ್ ಆಗಿರುವ ಇಂಥಾ ಸಂಬಂಧ ಬಂದೇ ಇರಲಿಲ್ಲ. ಆ ಮನೆಯ ಹಿರಿಯ ಗಂಡಸು ಮಾತನಾಡಿ